ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/63/2015-16. ದಿನಾಂಕ: 03-08-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಪಿ.ಜಾತಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ<br>2)ಕಲ್ಲಜ್ಜಿ ಮೂಗಪ್ಪ ತಂದೆ ಅಜ್ಜಪ್ಪ<br>ಕ್ಯಾನಸಕೇರಿ ಗ್ರಾಮ<br>ಕೂಡ್ಲಿಗಿ ತಾಲೂಕು | 1)ನಾಗೇಂದ್ರಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ<br>2)ಚನ್ನಬಸಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ<br>ಕ್ಯಾಸನಕೇರಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲ್ಲೂಕು ಅಡವಿಸೂರವ್ವನಹಳ್ಳಿ ಗ್ರಾಮದ ಸನಂ 62ಬಿ. ವಿಸ್ತೀರ್ಣ 1-07. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಅಡವಿಸೂರವ್ವನಹಳ್ಳಿ ಗ್ರಾಮದ ಸನಂ 62ಬಿ. ವಿಸ್ತೀರ್ಣ 1-07. ಎಕ್ರೆ ಜಮೀನನ್ನು ಸದರಿ ತಾಲೂಕು ಕ್ಯಾಸನಕೇರಿ ಗ್ರಾಮದ ಪಿ.ಜಾತಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ ಇವರು ದಿನಾಂಕ 01-01-2009 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಅಡವಿಸೂರವ್ವನಹಳ್ಳಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 27-03-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಕ್ಯಾಸನಕೇರಿ ಗ್ರಾಮದ ನಾಗೇಂದ್ರಪ್ಪ ತಂದೆ ಲೇಟ್ ಕಲ್ಲಜ್ಜಿ. ಮೂಗಪ್ಪ. ಚನ್ನಬಸಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 14/2013-14. ದಿನಾಂಕ 28-04-2014 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 13-01-2016. ರಿಂದ 03-08-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಅಡವಿಸೂರವ್ವನಹಳ್ಳಿ ಗ್ರಾಮದ ಸನಂ 62ಬಿ. ವಿಸ್ತೀರ್ಣ 1-07 ಎಕ್ರೆ ಜಮೀನು ಅರ್ಜಿದಾರರ ತಂದೆಯಾದ ಕಲ್ಲಜ್ಜಿ ಮೂಗಪ್ಪ ತಂದೆ ಅಜ್ಜಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 01-11-2011 ರಂದು ಹಾಗೂ ಇವರ ತಾಯಿಯವರಾದ ಕೆ.ಚನ್ನಬಸಮ್ಮ ಗಂಡ ಲೇಟ್ ಕಲ್ಲಜ್ಜಿ ಮೂಗಪ್ಪ ಇವರು ದಿನಾಂಕ 10-08-2009 ರಂದು ನಿಧನ ಹೊಂದಿರುತ್ತಾರೆ. ಅರ್ಜಿದಾರರು ಸದರಿ ಜಮೀನನ್ನು ದಿನಾಂಕ 01-01-2009 ರಂದು ಪಾಲು ವಿಭಾಗ ಪತ್ರ ಬರೆಯಿಸಿರುತ್ತಾರೆ. ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಸದರಿ ಜಮೀನು ಅರ್ಜಿದಾರರ ಹಿಸ್ಯಾಕ್ಕೆ ಬಂದಿರುತ್ತದೆ. ಕಾರಣ ಸದರಿ ಪಾಲು ವಿಭಾಗದ ಪತ್ರದಂತೆ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನಲ್ಲಿ ಹಕ್ಕು ಇರುವುದರಿಂದ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನನ್ನ ತಕರಾರು ಇರುವುದೆಂದು ತಕರಾರು ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ತಕರಾರುದಾರರು ವಿಚಾರಣೆಗೆ ಹಾಜರಾಗಿ ತಮ್ಮ ಹಕ್ಕನ್ನು ಸಾಬೀತು ಪಡಿಸುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಲು ವಿಫಲರಾದ ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಅಡವಿಸೂರವ್ವನಹಳ್ಳಿ ಗ್ರಾಮದ ಸನಂ 62ಬಿ. ವಿಸ್ತೀರ್ಣ 1-07. ಎಕ್ರೆ ಜಮೀನನ್ನು ದಿನಾಂಕ 01-01-2009 ರ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರಾದ ಪಿ.ಜಾತಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ ಕ್ಯಾಸನಕೇರಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 03-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು ಕೂಡ್ಲಿಗಿ
ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಪಿ.ಜಾತಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ ಕ್ಯಾಸನಕೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಹೆಚ್. ಗುರುರಾಜ್‌ರಾವ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ನಾಗೇಂದ್ರಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ. ಚನ್ನಬಸಪ್ಪ ತಂದೆ ಲೇಟ್ ಕಲ್ಲಜ್ಜಿ ಮೂಗಪ್ಪ ಕ್ಯಾನನಕೇರಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕವೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲೂಕು ಕಛೇರಿ
ಕೂಡ್ಲಿಗಿ.